# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 620/14

**ಸಾಕ್ಷಿಯನ್ನು ದಿಃ 23.11.2022 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಮಂಜುನಾಥ | ಸಿಡಬ್ಲ್ಯೂಃ 14 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ಉದಯಕುಮಾರ | | |
| ವಯಸ್ಸು | 39 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಮಂಟಿಕೊಪ್ಪಲು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-3 ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ.98 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.98(ಎ) ಎಂದು ಗುರುತಿಸಲಾಯಿತು.

ನಿಪಿ.98 ಕ್ಕೆ ಸಮಾರು 8 ವರ್ಷಗಳ ಹಿಂದೆ ಆಸ್ಪತ್ರೆ ಯಲ್ಲಿ ಸಹಿ ಮಾಡಿದ್ದೆ. ಅದರಲ್ಲಿ ಏನು ಬರೆದಿದೆ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ.

ನನ್ನ ಸಮಕ್ಷಮ ಆರ್ 41 – 46 ವರೆಗೆ ದಾಖಲಾತಿಗಳನ್ನು ಸಾಕ್ಷಿ ನೋಡಿ ಆ ಬಗ್ಗೆ ನನಗೆ ಗೊತ್ತಿಲ್ಲ ಅದರಲ್ಲಿರುವ ಸಹಿ ನನ್ನದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನಿಪಿ.99 ರಿಂದ ನಿಪಿ.104 ಎಂದು ಸಾಕ್ಷಿಯ ಸಹಿಯನ್ನು ನಿಪಿ.99 ಎ – 104 ಎ ಎಂದು ಗುರುತಿಸಲಾಯಿತು. ಚಾಸಾ-3

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 15.07.2013 ರಂದು ಹುಣಸೂರು ಪಟ್ಟಣ ಠಾಣೆಯಲ್ಲಿ ಚಾಸಾ–3 ರವರ ಕೋರಿಕಾ ಬರವಣಿಗೆ ಸಹಿಯನ್ನು ಪೊಲೀಸರು ನನ್ನ ಸಮಕ್ಷಮ 2 –3 ರವರೆಗೆ 6 ಬಿಳಿ ಹಾಳೆಗಳಲ್ಲಿ ಆರ್ 41 –46 ಎಂದುಕ್ರಮಾಂಕ ನೀಡಿದ್ದು, ಸಹಿಗಳನ್ನು ಆರ್ 41 ಎ – 46 ಹೆಚ್ ಎಂದು ಕ್ರಮಾಂಕದ ಅಡಿಯಲ್ಲಿ ಚಾಸಾ–3,15 ರವರ ಸಮಕ್ಷಮ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.